**<u>ಸಾಕ್ಷಿಯನ್ನು ದಿನಾಂಕಃ11.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಎನ್ ಆರ್ ವಕೀಲರಿಂದಃ</u>**

1. ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿದ್ದೇನೆ. ದಾವಾ ಸ್ವತ್ತಿಗೆ ಮತ್ತು ನಮ್ಮ ಊರಿಗೆ ಸುಮಾರು 1/2 ಕಿ ಮೀಟರ್ ದೂರ ಇದೆ. ಈ ಪ್ರಕರಣದಲ್ಲಿ ನಾನು ಯಾವ ಯಾವ ಪ್ರತಿವಾದಿಯರು ಏನೇನು ತಕರಾರು ಸಲ್ಲಿಸಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ಸರ್ವೆ ನಂಬರ್ 7/1 ಮೂಲತಃ 26 ಎಕರೆ 1 ಗುಂಟೆ ವಿಸ್ತೀರ್ಣ ಇದ್ದು, ಮೂಲತಃ ಚಿಕ್ಕನಂಜುಂಡ ಮತ್ತು ಮರಿಯಕ್ಕ ರವರಿಗೆ ಸೇರಿತ್ತು. ಮರಿಯಕ್ಕನ ಗಂಡನ ಹೆಸರು ದೊಡ್ಡನಂಜುಂಡ ಎಂದರೆ ಸರಿ. ದೊಡ್ಡನಂಜುಂಡ ಮತ್ತು ಚಿಕ್ಕ ನಂಜುಂಡ ಇಬ್ಬರೂ ಅಣ್ಣತಮ್ಮಂದಿರು ಎಂದರೆ ಸರಿ. ಅವರ ತಂದೆ ತಾಯಿ ಪಿಡ್ಡೇಗೌಡ ಮತ್ತು ನಿಂಗಮ್ಮ ಎಂದರೆ ಸರಿ. ದೊಡ್ಡನಂಜಂಡ ಮತ್ತು ಮರಿಯಕ್ಕನವರಿಗೆ ನಂಜಮ್ಮ, ನಿಂಗಮ್ಮ ಮತ್ತು ಸಣ್ಣಮ್ಮ ಎಂಬ ಮೂವರು ಹೆಣ್ಣು ಮಕ್ಕಳು ಎಂದರೆ ಸರಿ. ನಂಜಮ್ಮನಿಗೆ ಬೋರೇಗೌಡ, ತಮ್ಮೇಗೌಡ, ಚಿಕ್ಕಮರಿಗೌಡ ಮತ್ತು ಚಿಕ್ಕತಾಯಮ್ಮ ಎಂಬ 4 ಜನ ಮಕ್ಕಳು ಎಂದರೆ ಸರಿ. ಅವರುಗಳ ಪೈಕಿ ಚಿಕ್ಕಮರಿಗೌಡ ಈ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ತಮ್ಮೇಗೌಡ ಮೃತಪಟ್ಟಿದ್ದಾರೆ ಎಂದರೆ ಸರಿ. ಅವರಿಗೆ ದೊಡ್ಡಬಿಳೀಗೌಡ, ಬೋರೇಗೌಡ, ಶಿವಣ್ಣ ಮತ್ತು ಪುಟ್ಟಸ್ವಾಮಿ ಎಂಬ 4 ಜನ ಮಕ್ಕಳು ಇದ್ದಾರೆ ಎಂದರೆ ಸರಿ. ದೊಡ್ಡಬಿಳೀಗೌಡ ಮತ್ತು ಶಿವಣ್ಣ ಮೃತಪಟ್ಟಿದ್ದಾರೆ ಎಂದರೆ ಸರಿ. ದೊಡ್ಡಬಿಳೀಗೌಡರಿಗೆ ಸಂತೋಷ, ಯೋಗೇಶ ಮತ್ತು ಇಂದುಮತಿ ಎಂಬ ಮೂವರು ಮಕ್ಕಳು ಎಂದರೆ ಸರಿ. ದೊಡ್ಡಬಿಳೀಗೌಡರ ಹೆಂಡತಿಯ

ಹೆಸರು ಚಿಕ್ಕತಾಯಮ್ಮ. ಶಿವಣ್ಣನವರಿಗೆ ಸರೋಜ ಎಂಬ ಹೆಂಡತಿ ಮತ್ತು ನಿಂಗರಾಜ ಹಾಗೂ ಮನುಕುಮಾರ ಎಂಬ ಮಕ್ಕಳು ಎಂದರೆ ಸರಿ. ವಾದಿಯ ಹಿರಿಯ ಸಹೋದರ ಬೋರೇಗೌಡ ವಾದಿಯ ತಾಯಿ ನಂಜಮ್ಮನ ಸಹೋದರಿ ಸಣ್ಣಮ್ಮರವರಿಗೆ ದತ್ತು ಹೋಗಿದ್ದರು ಎಂದರೆ ಸರಿ. ವಾದಿಯ ತಾಯಿ ನಂಜಮ್ಮನ ಮತ್ತೊಬ್ಬ ಸಹೋದರಿ ನಿಂಗಮ್ಮಳಿಗೆ ಚೆನ್ನಮ್ಮ ಎಂಬ ಮಗಳು ಇದ್ದಳು ಎಂದರೆ ಸರಿ. ಚಿಕ್ಕನಂಜುಂಡನಿಗೆ ನಿಂಗಮ್ಮ ಎಂಬ ಹೆಂಡತಿ ಇದ್ದರು ಎಂದರೆ ಸರಿ. ಅವರಿಗೆ ನಂಜಪ್ಪ ಯಾನೆ ಸುಬ್ಬಣ್ಣ ಎಂಬ ಒಬ್ಬನೇ ಮಗ ಇದ್ದ ಎಂದರೆ ಸರಿ. ಅವರಿಗೆ ರಮೇಶ, ಚನ್ನಕೇಶವ ಮತ್ತು ಸರೋಜ ಎಂಬ ಮೂವರು ಮಕ್ಕಳು ಎಂದರೆ ಸರಿ. ವಾದಿಯ ಸಹೋದರ ಬೋರೇಗೌಡನಿಗೆ ಮರಿಚಿಕ್ಕಮ್ಮ ಎಂಬ ಹೆಂಡತಿ ಇದ್ದಳು ಎಂದರೆ ಸರಿ. ಅವರಿಗೆ ಶಾಂತಮ್ಮ, ರಮೇಶ, ಶಿವರಾಜು, ಮಹಲಿಂಗಯ್ಯ, ಕುಮಾರ ಮತ್ತು ಚಿಕ್ಕತಾಯಮ್ಮ ಎಂಬ ಮಕ್ಕಳು ಎಂದರೆ ಸರಿ. ಮೇಲೆ ಹೇಳಿದವರೆಲ್ಲಾ ಪಿಡ್ಡೇಗೌಡ ಮತ್ತು ನಿಂಗಮ್ಮನ ವಂಶಸ್ಥರು ಎಂದರೆ ಸರಿಯಲ್ಲ. ಪಿಡ್ಡೇಗೌಡ ಮತ್ತು ನಿಂಗಮ್ಮನ ವಾರಸುದಾರರು ಯಾರು ಎಂದು ನನಗೆ ಗೊತ್ತಿಲ್ಲ.

2. ಈ ಪ್ರಕರಣದಲ್ಲಿ ವಾದಿಯರ ಪರವಾಗಿ ಏನೇನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪಿಡ್ಡೇಗೌಡ ಮತ್ತು ನಿಂಗಮ್ಮ ಕಳ್ಳಿಕೊಪ್ಪಲಿನವರು. ಅವರನ್ನು ನಾನು ನೋಡಿಲ್ಲ. ಈ ದಾವೆಯನ್ನು ದಾಖಲಿಸಿದ ನಂತರ ಪಿಡ್ಡೇಗೌಡ ಮತ್ತು ನಿಂಗಮ್ಮ ರವರ ವಾರಸುದಾರರು ಯಾರು ಎಂದು

ತಿಳಿದುಕೊಳ್ಳಲು ನಾನು ಪ್ರಯತ್ನಿಸಿದೆನಾ ಎಂದರೆ ನಮಗೆ ಆಸ್ತಿ ಮಾರಾಟ ಮಾಡಿರುವ ಬೋರಯ್ಯನವರು ಅವರ ವಾರಸುದಾರರು ಎಂದು ತಿಳಿದುಕೊಂಡಿದ್ದೇನೆ. ಪಿಡ್ಡೇಗೌಡ ಮತ್ತು ನಿಂಗಮ್ಮನವರ ಕುಟುಂಬದವರಿಗೆ ಒಟ್ಟು ಎಷ್ಟು ಆಸ್ತಿ ಇತ್ತು ಎಂದು ನನಗೆ ಮಾಹಿತಿ ಇದೆಯಾ ಎಂದರೆ, ಸರ್ವೆ ನಂಬರ್ 7 ರ ಪೂರ್ತಾ ಜಮೀನು ಅವರಿಗೆ ಸೇರಿತ್ತು ಎಂಬ ಮಾಹಿತಿ ಮಾತ್ರ ಇದೆ. ಪಿಡ್ಡೇಗೌಡ ಮತ್ತು ನಿಂಗಮ್ಮ ರವರು ಮೃತ ಪಟ್ಟ ನಂತರ ಸದರಿ ಆಸ್ತಿಯ ಕಂದಾಯ ದಾಖಲೆಗಳು ಚಿಕ್ಕನಂಜುಂಡ ಮತ್ತು ಮರಿಯಕ್ಕ ರವರ ಹೆಸರಿಗೆ ಖಾತೆ ಬದಲಾವಣೆ ಆಗಿತ್ತು ಎಂದು ತಿಳಿದುಕೊಂಡಿದ್ದೇನೆ. ಮರಿಯಕ್ಕನವರನ್ನು ನಾನು ನೋಡಿಲ್ಲ, ಅವರು ಯಾವಾಗ ಮೃತ ಪಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮರಿಯಕ್ಕ ಮೃತ ಪಟ್ಟ ನಂತರ ಸದರಿ ಆಸ್ತಿಯ ಕಂದಾಯ ದಾಖಲೆಗಳು ಅವರ ಮಗಳು ಸಣ್ಣಮ್ಮನ ಹೆಸರಿಗೆ ಖಾತೆ ಬದಲಾವಣೆ ಆಗಿತ್ತು ಎಂದು ತಿಳಿದುಕೊಂಡಿದ್ದೇನೆ. ಚಿಕ್ಕನಂಜುಂಡ ಮತ್ತು ಮರಿಯಕ್ಕ ರವರು ಸರ್ವೆ ನಂಬರ್ 7 ರ ಆಸ್ತಿಯನ್ನು ವಿಭಾಗ ಮಾಡಿಕೊಂಡಿದ್ದರು ಎಂಬ ಬಗ್ಗೆ ನನಗೆ ಖುದ್ದು ಮಾಹಿತಿ ಇದೆ. ಯಾವ ವರ್ಷದಲ್ಲಿ ವಿಭಾಗ ಮಾಡಿಕೊಂಡಿದ್ದರು ಎಂಬ ಬಗ್ಗೆ ನನಗೆ ದಿನಾಂಕ ಗೊತ್ತಿಲ್ಲ. ಅದಕ್ಕೆ ಸಂಬಂಧಿಸಿದಂತೆ ನಾನು ದಾಖಲಾತಿಯನ್ನು ನೋಡಿಲ್ಲ. ಅವರಿಬ್ಬರಿಗೆ ಎಷ್ಟೆಷ್ಟು ಆಸ್ತಿ ವಿಭಾಗದಲ್ಲಿ ಬಂದಿತ್ತು ಎಂಬ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ. ಸರ್ವೆ ನಂಬರ್ 7 ರ ಯಾವ ಯಾವ ಭಾಗ ಯಾವ ಯಾವ ದಿಕ್ಕಿನಲ್ಲಿ ಅವರಿಗೆ ಬಂದಿತ್ತು ಎಂಬ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ. ನಾನು ಆ ವಿಭಾಗಕ್ಕೆ ಸೇರಿಲ್ಲ.

ವಾದಿಯು ಈ ಕೇಸನ್ನು ಹಾಕಿದ ನಂತರ ಚಿಕ್ಕನಂಜುಂಡ ಮತ್ತು ಮರಿಯಕ್ಕ ವಿಭಾಗ ಮಾಡಿಕೊಂಡಿರುವ ಬಗ್ಗೆ ದಾಖಲಾತಿಯನ್ನು ಪರಿಶೀಲಿಸಿಲ್ಲ. ಮರಿಯಕ್ಕ ಮೃತ ಪಟ್ಟ ನಂತರ ಅವರ ಆಸ್ತಿಗೆ ಅವರ ಮಕ್ಕಳಾದ ನಂಜಮ್ಮ, ನಿಂಗಮ್ಮ ಮತ್ತು ಸಣ್ಣಮ್ಮ ಹಕ್ಕುದಾರರು ಎಂದರೆ ಸರಿಯಲ್ಲ, ಸಣ್ಣಮ್ಮ ಒಬ್ಬಳೇ ವಾರಸುದಾರರು. ನಂಜಮ್ಮ ಮತ್ತು ನಿಂಗಮ್ಮ ಸಣ್ಣಮ್ಮನ ಅಕ್ಕಂದಿರು ಎಂದರೆ ಸರಿ. ಮರಿಯಕ್ಕ ಬದುಕಿದ್ದ ಸಂದರ್ಭದಲ್ಲಿ ತನ್ನ ಮಕ್ಕಳ ನಡುವೆ ಸರ್ವೆ ನಂಬರ್ 7 ರ ಆಸ್ತಿಗೆ ಸಂಬಂಧಿಸಿದಂತೆ ವಿಭಾಗ ಮಾಡಿಕೊಟ್ಟಿದ್ದರಾ ಎಂದು ನನಗೆ ಗೊತ್ತಿಲ್ಲ. ನಂಜಮ್ಮ, ನಿಂಗಮ್ಮ ಮತ್ತು ಸಣ್ಣಮ್ಮಯಾವಾಗ ಮೃತ ಪಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಣ್ಣಮ್ಮನ ಹೆಸರಿಗೆ ಸರ್ವೆ ನಂಬರ್ 7 ರಲ್ಲಿ ಎಷ್ಟು ಎಕರೆ ಜಮೀನು ಖಾತೆ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ನಮ್ಮನ್ನು ಪಕ್ಷಗಾರರನ್ನಾಗಿ ಮಾಡಿದ ನಂತರ ಆ ಬಗ್ಗೆ ನಾನು ಪರಿಶೀಲನೆ ಮಾಡಿಲ್ಲ. ಚಿಕ್ಕ ನಂಜುಂಡನ ವಾರಸುದಾರರಾದ ನಂಜಪ್ಪ ಯಾನೆ ಸುಬ್ಬಣ್ಣ ರವರಿಗೆ ಎಷ್ಟು ಎಕರೆ ಜಮೀನು ಖಾತೆ ಆಗಿತ್ತು ಎಂದು ನನಗೆ ಗೊತ್ತಿಲ್ಲ.

3. ದಾವಾ ಆಸ್ತಿಯಲ್ಲಿ ನನ್ನ ತಂದೆ 2 ಎಕರೆ 7 ಗುಂಟೆ ಆಸ್ತಿಯನ್ನು ಖರೀದಿ ಮಾಡಿದ್ದಾರೆ. ಅದನ್ನು ಮಾರಾಟ ಮಾಡಿದವರು ಸಣ್ಣಮ್ಮನ ಮಗ ಬೋರಯ್ಯ. ನಮ್ಮ ತಂದೆ ಖರೀದಿ ಮಾಡಿದ ಕಾಲಕ್ಕೆ ಬೋರಯ್ಯನ ಹೆಸರಿನಲ್ಲಿ ಖಾತೆ ಇತ್ತು. ನಾನು ಆ ಖರೀದಿ ವ್ಯವಹಾರಕ್ಕೆ ಸೇರಿರಲಿಲ್ಲ. ಆ ಸಮಯದಲ್ಲಿ ಬೋರಯ್ಯನ ಹೆಸರಿಗೆ ಎಷ್ಟು ಎಕರೆ ಜಮೀನಿಗೆ ಖಾತೆ ಇತ್ತು ಎಂದು ನನಗೆ ಗೊತ್ತಿಲ್ಲ.

4. ಸರ್ವೆ ನಂಬರ್ 7 ಕ್ಕೆ ಸಂಬಂಧಿಸಿದಂತೆ ಮದ್ದೂರು ತಹಶೀಲ್ದಾರ್, ಮಂಡ್ಯ ಜಿಲ್ಲಾಧಿಕಾರಿ, ಮಂಡ್ಯ ಉಪವಿಭಾಗಾಧಿಕಾರಿ ನ್ಯಾಯಾಲಯಗಳಲ್ಲಿ ಪ್ರಕರಣ ದಾಖಲಾಗಿದ್ದ ಬಗ್ಗೆ ನನಗೆ ಮಾಹಿತಿ ಇದೆ. ಆ ಪ್ರಕರಣಗಳಲ್ಲಿ ನಾನಾಗಲೀ ಅಥವಾ ನನ್ನ ತಂದೆಯಾಗಲೀ ಪಕ್ಷಗಾರರಾಗಿರಲಿಲ್ಲ. ಆ ನ್ಯಾಯಾಲಯಗಳಲ್ಲಿ ಯಾರ ಯಾರ ನಡುವೆ ಪ್ರಕರಣ ನಡೆದಿದೆ ಎಂದು ನನಗೆ ಖುದ್ದು ಮಾಹಿತಿ ಇಲ್ಲ. ಆ ಪ್ರಕರಣಗಳಲ್ಲಿ ಮರಿಯಕ್ಕನ ವಾರಸುದಾರರು ಮತ್ತು ಚಿಕ್ಕನಂಜುಂಡನ ವಾರಸುದಾರರ ಪರವಾಗಿ ತೀರ್ಮಾನ ಆಗಿದೆ ಎಂದು ತಿಳಿದುಕೊಂಡಿದ್ದೇನೆ. ಪೂರ್ತಿ 26 ಎಕರೆ 1 ಗುಂಟೆ ಜಮೀನು ಬೋರಯ್ಯನ ವಾರಸುದಾರರಿಗೆ ಮತ್ತು ನಂಜಪ್ಪ ಯಾನೆ ಸುಬ್ಬಣ್ಣ ರವರ ವಾರಸುದಾರರ ಪರವಾಗಿ ತೀರ್ಮಾನ ಆಗಿರುತ್ತದೆ. ಸಣ್ಣಮ್ಮನಿಗೆ ನಂಜಮ್ಮ ಮತ್ತು ನಿಂಗಮ್ಮರವರು ತಮ್ಮ ಹಕ್ಕನ್ನು ತ್ಯಜಿಸಿ ದಾಖಲಾತಿಯನ್ನು ಮಾಡಿಕೊಟ್ಟಿದ್ದಾರೆ. ಆ ರೀತಿ ಯಾವ ದಾಖಲಾತಿ ಮಾಡಿಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ, ಆ ದಾಖಲಾತಿಯನ್ನು ನಾನು ನೋಡಿಲ್ಲ. ಆ ದಾಖಲಾತಿ ಬೋರಯ್ಯನ ಮಕ್ಕಳ ಹತ್ತಿರ ಇರುತ್ತದೆ. ಈ ಕೇಸನ್ನು ಹಾಕಿದ ನಂತರ ನಾನು ಆ ದಾಖಲೆಯನ್ನು ಕೊಡಿ ಎಂದು ಬೋರಯ್ಯನ ಮಕ್ಕಳ ಹತ್ತಿರ ಕೇಳಿಲ್ಲ. ಆ ರೀತಿ ಕೇಳಲು ತೊಂದರೆ ಇತ್ತಾ ಎಂದರೆ, ನಾವು ಕ್ರಯಕ್ಕೆ ಪಡೆದುಕೊಂಡು ಸ್ವಾಧೀನದಲ್ಲಿ ಇದ್ದಿದ್ದರಿಂದ ಕೇಳಿಲ್ಲ. ನಂಜಮ್ಮ ಮತ್ತು ನಿಂಗಮ್ಮ ನವರು ಮರಿಯಕ್ಕನ ಹೆಸರಿನಲ್ಲಿ ಇದ್ದ ಎಲ್ಲಾ ಆಸ್ತಿಗೆ ಹಕ್ಕು ನಿವೃತ್ತಿ ಮಾಡಿಕೊಟ್ಟಿದ್ದಾರೆ. ಆ ದಾಖಲೆ ನೊಂದಾವಣೆ ಆಗಿದೆ. ಆ ದಾಖಲೆಯನ್ನು

ಪಡೆದುಕೊಂಡು ನ್ಯಾಯಾಲಯಕ್ಕೆ ಕೊಡಬಹುದು ಎಂದರೆ ಅವಶ್ಯಕತೆ ಇದ್ದರೆ ಕೊಡಬಹುದು. ಈ ದಾವೆಗೆ ನಾವು ತಕರಾರು ಸಲ್ಲಿಸಿದಾಗ ಆ ದಾಖಲೆಯನ್ನು ಪಡೆದುಕೊಂಡು ಪರಿಶೀಲನೆ ಮಾಡಿಲ್ಲ. ಆ ದಾಖಲೆಯನ್ನು ಯಾರು ಬರೆದಿದ್ದಾರೆ ಎಂಬ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.)**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.